**ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01**

**ಸಂಖ್ಯೆ:** ಸ.ಶಿ.ಅ/ಹೆ.ಮ.ಶಿ/ಕೆ.ಜಿ.ಬಿ.ವಿ./ಏ.ಆ/2010-11 **ದಿನಾಂಕ:** 20-04-2010

# ಸುತ್ತೋಲೆ

**ವಿಷಯ:** ಆಹಾರ ಪೂರೈಕೆ ಮತ್ತು ಅರೆಕಾಲಿಕ ಸಿಬ್ಬಂದಿಯ ನೇಮಕಾತಿ ಕುರಿತು.

**ಉಲ್ಲೇಖ:** ಈ ಕಛೇರಿ ಸುತ್ತೋಲೆ ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಕೆ.ಜಿ.ಬಿ.ವಿ/ಎಸ್.ಡಿ.ಎಂ.ಸಿ ರಚನೆ/2009-10. ದಿನಾಂಕ: 30-09-09

******

ಮೇಲಿನ ವಿಷಯದನ್ವಯ, ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಯ ಮಕ್ಕಳಿಗೆ ಆಹಾರ ಪೂರೈಕೆ ಮಾಡಲು ಹಾಗೂ ಅರೆಕಾಲಿಕ ಸಿಬ್ಬಂದಿಯ ಸೇವೆ ಪೂರೈಸಲು ಅರ್ಹ ಏಜೆನ್ಸಿಯನ್ನು ಈ ಹಿಂದೆ ಜಿಲ್ಲಾ ಹಂತದಲ್ಲಿ ಗುರ್ತಿಸಲಾಗುತ್ತಿತ್ತು. ಆದರೆ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಗಳಲ್ಲಿ ಉಲ್ಲೇಖಿತ ಸುತ್ತೋಲೆಯಂತೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸಲು ಸೂಚಿಸಲಾಗಿದೆ. ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಗಳಲ್ಲಿ ರಚಿತವಾಗಿರುವ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ಇರುವ ಅಧಿಕಾರಗಳ ಕುರಿತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ತರಬೇತಿ ಸಂಪನ್ಮೂಲ ಸಾಹಿತ್ಯ 'ಸ್ಪಂದನ'ದಲ್ಲಿ ವಿವರಿಸಿರುವಂತೆ ಆಹಾರ ಪೂರೈಕೆ ಹಾಗೂ ಸಿಬ್ಬಂದಿಯ ಸೇವೆಯನ್ನು ಪೂರೈಸುವ ಏಜೆನ್ಸಿಗಳನ್ನು ಶಾಲಾ ಹಂತದಲ್ಲಿ ಆಯ್ಕೆ ಮಾಡಲು ಈ ಕೆಳಗಿನಂತೆ ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

1. ಸಂಬಂಧಿಸಿದ ಸೇವೆಗೆ ಅರ್ಹ ಏಜೆನ್ಸಿಯನ್ನು ಗುರ್ತಿಸುವ ಸಂಬಂಧ ದರಪಟ್ಟಿಯನ್ನು ಆಹ್ವಾನಿಸುವುದು. ದರಪಟ್ಟಿ ಸಲ್ಲಿಸಲು 7 ದಿನಗಳ ಕಾಲಾವಕಾಶ ನೀಡುವುದು.
2. ಸಂಬಂಧಿಸಿದ ಬ್ಲಾಕ್‌ನ ಕ್ಷೇತ್ರಶಿಕ್ಷಣಾಧಿಕಾರಿಗಳು ಜಿಲ್ಲೆಯ ಯೋಜನಾ ಉಪಸಮನ್ವಯಾಧಿಕಾರಿಗಳ ಸಮನ್ವಯದೊಂದಿಗೆ ಈ ಕುರಿತು ಕ್ರಮ ಕೈಗೊಳ್ಳುವುದು.
3. ದರಪಟ್ಟಿ ಆಹ್ವಾನ ಕುರಿತ ಜಾಹೀರಾತನ್ನು ರಾಜ್ಯ ಅಥವಾ ಜಿಲ್ಲಾ ಹಂತದ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿ, ಸರ್ವ ಶಿಕ್ಷಣ ಅಭಿಯಾನದ ಖರೀದಿ ನಿಯಮಾನುಸಾರ ಅರ್ಹ ಏಜೆನ್ಸಿಯನ್ನು ಆಯ್ಕೆ ಮಾಡುವುದು.
4. ಆಹಾರ ಪೂರೈಕೆಗೆ ಸಂಬಂಧಿಸಿದಂತೆ ಏಜೆನ್ಸಿಯನ್ನು ಆಯ್ಕೆ ಮಾಡಲು ಅನುಸರಿಸಬೇಕಾದ ಮಾನದಂಡಗಳನ್ನು ಅನುಬಂಧ-1 ರಲ್ಲಿ ನೀಡಿದೆ. ಸೂಚಿತ ಮಾನದಂಡಗಳನುಸಾರ ಆಯ್ಕೆ ಪ್ರಕ್ರಿಯೆ ಕೈಗೊಳ್ಳುವುದು.

5. ಶಿಕ್ಷಕರ ಸೇವೆಯನ್ನು ಒದಗಿಸುವ ಏಜೆನ್ಸಿಯನ್ನು ಆಯ್ಕೆ ಮಾಡಲು ಅನುಸರಿಸಬೇಕಾದ ಮಾನದಂಡಗಳನ್ನು ಅನುಬಂಧ-2 ರಲ್ಲಿ ನೀಡಿದೆ. ಸೂಚಿತ ಮಾನದಂಡಗಳನುಸಾರ ಆಯ್ಕೆ ಪ್ರಕ್ರಿಯೆ ಕೈಗೊಳ್ಳುವುದು.
6. ಶಿಕ್ಷಕರು ಹಾಗೂ ಇತರೆ ಸಿಬ್ಬಂದಿಯ ಸೇವೆಯು ತೃಪ್ತಿಕರವಾಗಿದ್ದು, ಸಿಬ್ಬಂದಿಯು ಆಯ್ಕೆಯಾದ ನೂತನ ಏಜೆನ್ಸಿಯ ಅಡಿಯಲ್ಲಿ ಸೇವೆ ಸಲ್ಲಿಸಲು ಇಚ್ಛೆ ವ್ಯಕ್ತಪಡಿಸಿದಲ್ಲಿ ಸಿಬ್ಬಂದಿಯನ್ನು ನೂತನ ಏಜೆನ್ಸಿಯ ಅಡಿ ತರುವುದು.
7. ಏಜೆನ್ಸಿಗಳ ಆಯ್ಕೆ ಪ್ರಕ್ರಿಯೆಯನ್ನು ಸಂಬಂಧಿಸಿದ ಜಿಲ್ಲೆಯ ಯೋಜನಾ ಉಪಸಮನ್ವಯಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು, ಮುಖ್ಯ ಶಿಕ್ಷಕರು ಹಾಗೂ ವಾರ್ಡನ್ ಇವರುಗಳನ್ನೊಳಗೊಂಡ ಸಮಿತಿಯು ಕೈಗೊಳ್ಳಬೇಕು. ಆಯ್ಕೆ ಕುರಿತ ಅನುಮೋದನೆಯನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಿಂದ ಪಡೆಯಬೇಕು. ಜಿಲ್ಲೆಯ ಜಿಲ್ಲಾ ಅನುಷ್ಠಾನ ಸಮಿತಿಯಿಂದ ಘಟನೋತ್ತರ ಅನುಮತಿಯನ್ನು ಪಡೆಯುವುದು.
8. ಆಯ್ಕೆ ಪ್ರಕ್ರಿಯೆಯು ಪಾರದರ್ಶಕವಾಗಿದ್ದು, ಯಾವುದೇ ದೂರುಗಳಿಗೆ ಅವಕಾಶ ಇಲ್ಲದಂತೆ ಕೈಗೊಳ್ಳುವ ಜವಾಬ್ದಾರಿ ಆಯ್ಕೆ ಸಮಿತಿಯದ್ದಾಗಿರುತ್ತದೆ. ಯಾವುದಾದರೂ ದೂರುಗಳು ಬಂದಲ್ಲಿ ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಜವಾಬ್ದಾರರನ್ನಾಗಿ ಮಾಡಲಾಗುತ್ತದೆ.
9. ಆಯ್ಕೆ ಪ್ರಕ್ರಿಯೆಯನ್ನು 20-05-2010 ರೊಳಗೆ ಪೂರೈಸಿ, ಈ ಕಛೇರಿಗೆ ವರದಿ ಮಾಡುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಇವರಿಗೆ-ಮುಂದಿನ ಕ್ರಮಕ್ಕಾಗಿ**

1. ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಮತ್ತು ಡಿವೈಪಿಸಿ ಗಳಿಗೆ
2. ಸಂಬಂಧಿಸಿದ ಜಿಲ್ಲೆಗಳ ಬಿ.ಇ.ಓ, ಬಿ.ಆರ್.ಸಿ ಮತ್ತು ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಯ ಮುಖ್ಯ ಶಿಕ್ಷಕರಿಗೆ

**ಮಾಹಿತಿಗಾಗಿ**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು-ಇವರಿಗೆ ವಂದನೆಗಳೊಂದಿಗೆ ಸಲ್ಲಿಸಿದೆ.

2. ಮಾನ್ಯ ಆಯುಕ್ತರು, ಸಾ.ಶಿ.ಇ., ಬೆಂಗಳೂರು. -ಇವರಿಗೆ ವಂದನೆಗಳೊಂದಿಗೆ ಸಲ್ಲಿಸಿದೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ-ಅಗತ್ಯ ಅನುಪಾಲನಾ ಕ್ರಮಕ್ಕಾಗಿ ಕಳುಹಿಸಿದೆ.
4. ಸಂಬಂಧಿಸಿದ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ - ಇವರಿಗೆ ಅಗತ್ಯ ಅನುಪಾಲನಾ ಕ್ರಮಕ್ಕಾಗಿ ಕಳುಹಿಸಿದೆ
5. ರಾಜ್ಯ ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ, #631, 22 ನೇ ಮೇನ್ ರೋಡ್, ಬಿ.ಎಂ.ಟಿ.ಸಿ, ಬಸ್ ಡಿಪೋ ಹತ್ತಿರ, 4 ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು.

## ಅನುಬಂಧ-1

## ಆಹಾರ ಪೂರೈಕೆಗೆ ಸಂಬಂಧಿಸಿದಂತೆ ಏಜೆನ್ಸಿಯನ್ನು ಆಯ್ಕೆ ಮಾಡಲು ಅನುಸರಿಸಬೇಕಾದ ಮಾನದಂಡಗಳು

**ಪ್ರತಿ ವಿದ್ಯಾರ್ಥಿನಿಗೆ ತಿಂಗಳಿಗೆ ರೂ.೮೦೦.೦೦ (ವಾರ್ಷಿಕ ೯.೬.ಲಕ್ಷ)ರಂತೆ ನಿರ್ವಹಣಾ ಅನುದಾನ :**

ಕೆಜಿಬಿವಿ ಶಾಲೆಗೆ ದಾಖಲಾದ ಪ್ರತಿ ಹೆಣ್ಣು ಮಗುವಿಗೆ ರೂ.800.00 ರಂತೆ ಪ್ರತಿ ಮಾಹೆ ನಿರ್ವಹಣಾ ಅನುದಾನ ಬಳಕೆ ಮಾಡುವ ಅವಕಾಶವಿದೆ. ಪ್ರತಿ ವಿದ್ಯಾರ್ಥಿನಿ ಶಾಲೆಗೆ ದಾಖಲಾಗುವ ದಿನಾಂಕದಿಂದ ಆ ತಿಂಗಳ ಮುಂದಿನ ಒಟ್ಟು ದಿನಗಳಿಗೆ ಲೆಕ್ಕಾಚಾರ ಮಾಡಿ ಖರ್ಚನ್ನು ಭರಿಸಬೇಕು. ಈ ಅನುದಾನವನ್ನು ಕೆಳಕಂಡ ಚಟುವಟಿಕೆಗಳಿಗೆ ಬಳಕೆ ಮಾಡಬೇಕು.

(ಅ) **ಊಟ/ತಿಂಡಿ ಸೌಲಭ್ಯ ಒದಗಿಸಲು** : ಸಂಬಂದಿಸಿದ ಏಜೆನ್ಸಿಯವರಿಗೆ ಆದೇಶ ನೀಡುವಾಗ ನಿಗದಿ ಪಡಿಸಲಾದ ವೇಳಾಪಟ್ಟಿಯಂತೆ ಹಾಗೂ ಆಯ್ಕೆ ಸಮಿತಿಯ ಸದಸ್ಯರು ನಿಯಮಿತವಾಗಿ ಶಾಲೆಗೆ ಭೇಟಿ ನೀಡಿ ಗುಣಮಟ್ಟದ ಆಹಾರ ನೀಡುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಇದಕ್ಕಾಗಿ ಪ್ರತ್ಯೇಕ ವಹಿಯನ್ನು ನಿರ್ವಹಿಸಿ ಪ್ರತಿ ದಿನ ಪ್ರತಿ ಭಾರಿ ನೀಡಿದ ಆಹಾರದ ವಿವರ ಹಾಗೂ ಆಹಾರ ಸೇವಿಸಿದ ವಿದ್ಯಾರ್ಥಿಗಳ ವಿವರವನ್ನು ದಾಖಲಿಸತಕ್ಕದ್ದು. ಇದರ ಆಧಾರದ ಮೇಲೆ ಏಜೆನ್ಸಿಗೆ ಆ ತಿಂಗಳ ಅನುದಾನ ಲೆಕ್ಕಾಚಾರ ಮಾಡಿ ಜಂಟಿ ಖಾತೆಯಿಂದ ಬಿಡುಗಡೆ ಮಾಡಲು ಕ್ರಮ ವಹಿಸಬೇಕು ಹಾಗೂ ದಾಖಲೆ ನಿರ್ವಹಿಸಬೇಕು. ಪ್ರತಿ ವಿದ್ಯಾರ್ಥಿನಿಗೂ ನೀಡಬೇಕಾದ ಆಹಾರದ ಸಲಹಾತ್ಮಕ ಪಟ್ಟಿಯನ್ನು ಹಾಗೂ ಮಗುವಿಗೆ ನೀಡಬೇಕಾದ ಪೌಷ್ಟಿಕಾಂಶದ ಪಟ್ಟಿಯನ್ನು ಕೆಳಗೆ ನೀಡಿದ್ದು, ಅದರಂತೆ ಆಹಾರವನ್ನು ನೀಡಲು ದರಪಟ್ಟಿಯನ್ನು ಆಹ್ವಾನಿಸುವುದು. ಪ್ರತಿ ಮಗುವಿನ ಪ್ರತಿ ಮಾಸದ ಗರಿಷ್ಠ ವೆಚ್ಚ ರೂ 800/- ಮೀರದಂತೆ ಆಹಾರ ಪೂರೈಕೆಗಾಗಿ ವೆಚ್ಚ ಮಾಡಬಹುದಾಗಿದೆ.

**ಪ್ರತಿ ಮಗುವಿಗೆ ಪ್ರತಿ ದಿನಕ್ಕೆ ನೀಡಬೇಕಾದ ಸಮತೋಲನ ಆಹಾರದ ವಿವರ(ಗ್ರಾಂ.ಗಳಲ್ಲಿ**

| ಆಹಾರ ಪದಾರ್ಥ | 7–9 ವಯಸ್ಸು | | 10–12 ವಯಸ್ಸು | | 13–15 ವಯಸ್ಸು | |
|---|---|---|---|---|---|---|
| | ಸಸ್ಯಹಾರ | ಮಾಂಸಾಹಾರ | ಸಸ್ಯಹಾರ | ಮಾಂಸಾಹಾರ | ಸಸ್ಯಹಾರ | ಮಾಂಸಾಹಾರ |
| ಧಾನ್ಯಗಳು | 220 | 220 | 290 | 290 | 400 | 400 |
| ಕಾಳುಗಳು | 70 | 60 | 70 | 60 | 70 | 50 |
| ಹಸಿರು ಎಲೆ ತರಕಾರಿಗಳು | 75 | 75 | 100 | 100 | 100 | 100 |
| ಇತರೆ ತರಕಾರಿಗಳು (ಗೆಡ್ಡೆ ಹಾಗೂ [illegible] ಸೇರಿದಂತೆ) | 50 | 50 | 75 | 75 | 150 | 150 |
| ಹಣ್ಣುಗಳು | 100 | 100 | 100 | 100 | 100 | 100 |
| ಹಾಲು | 600 | 400 | 600 | 400 | 600 | 400 |
| ಎಣ್ಣೆ | 30 | 30 | 30 | 30 | 30 | 30 |
| ಮಾಂಸ, ಮೀನು ಮತ್ತು ಮೊಟ್ಟೆ | – | 60 | – | 60 | – | 80 |
| ಸಕ್ಕರೆ ಮತ್ತು ಬೆಲ್ಲ | 30 | 30 | 30 | 30 | 30 | 30 |
| ಬೀಜಗಳು(ಕಡಲೆಬೀಜ) | 30 | 20 | 40 | 30 | 40 | 30 |

## ಸಿದ್ಧಪಡಿಸಿ ಒದಗಿಸಬಹುದಾದ ಆಹಾರದ ಸೂಚಿತ ಪಟ್ಟಿ

| ಕ್ರ.ಸಂ | ವಾರ | ಮುಂಜಾನೆ | ಬೆಳಗ್ಗಿನ ತಿಂಡಿ | ಮಧ್ಯಾಹ್ನದ ಊಟ | ಸಾಯಂಕಾಲದ ಲಘು ಉಪಹಾರ | ರಾತ್ರಿ ಊಟ |
|---|---|---|---|---|---|---|
| 1 | ಭಾನುವಾರ | ಹಾಲು/ಹಾರ್ಲಿಕ್ಸ್ /ಬೋರ್ನ್‌ವಿಟಾ/ಕಾಫಿ/ ಟೀ | ಇಡ್ಲಿ, ಸಾಂಬಾರು/ ಚಟ್ನಿ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಮಾಂಸಾಹಾರ, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ಕಾಫಿ/ಟೀ ಮತ್ತು ಮೊಳಕೆ ಒಡೆದ ಕಾಳು | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ ಸಾರು, ಮಜ್ಜಿಗೆ |
| 2 | ಸೋಮವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ಕಾಫಿ/ ಟೀ | ಚಿತ್ರಾನ್ನ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ,ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ಕಾಫಿ/ಟೀ ಹಾಗೂ ರಾಗಿ ಗಂಜಿ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ ಸಾರು, ಮಜ್ಜಿಗೆ |
| 3 | ಮಂಗಳವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ಕಾಫಿ/ ಟೀ | ಉಪ್ಪಿಟ್ಟು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ,ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ಕಾಫಿ/ಟೀ ಹಾಗೂ ಚುರುಮರಿ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ ಸಾರು, ಮಜ್ಜಿಗೆ |
| 4 | ಬುಧವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ಕಾಫಿ/ ಟೀ | ಅವಲಕ್ಕಿ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ,ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ಕಾಫಿ/ಟೀ ಹಾಗೂ ಅವಲಕ್ಕಿ ಚುಡಾ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ ಸಾರು, ಮಜ್ಜಿಗೆ |
| 5 | ಗುರುವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ಕಾಫಿ/ ಟೀ | ಪುಳಿಯೊಗರೆ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ,ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ಕಾಫಿ/ಟೀ ಮತ್ತು ಬ್ರೆಡ್ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ ಸಾರು, ಮಜ್ಜಿಗೆ |
| 6 | ಶುಕ್ರವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ಕಾಫಿ/ ಟೀ | ಪೂರಿ, ಸಾಗು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ,ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ಕಾಫಿ/ಟೀ ಮತ್ತು ಹುರಿದ ಕಡಲೆಬೀಜ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ ಸಾರು, ಮಜ್ಜಿಗೆ |
| 7 | ಶನಿವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ಕಾಫಿ/ ಟೀ | ತರಕಾರಿ ಪಲಾವ್ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ,ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ಕಾಫಿ/ಟೀ ಮತ್ತು ಪಕೋಡ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ ಸಾರು, ಮಜ್ಜಿಗೆ |

- ಆಯಾ ಋತುಮಾನದಲ್ಲಿ ಸಿಗುವ ಹಣ್ಣುಗಳನ್ನು ನೀಡಬೇಕು (ಎಲ್ಲ ತರಹದ ಹಣ್ಣುಗಳು, ವಾರಕ್ಕೆ ಮೂರು ಬಾರಿ)
- ಎಲ್ಲ ರೀತಿಯ ತರಕಾರಿಗಳನ್ನು ಬಳಸಬೇಕು.
- ಪ್ರತಿ ಭಾನುವಾರದಂದು ಮಾಂಸಾಹಾರ ಸೇವಿಸುವವರಿಗೆ ಮಾಂಸಾಹಾರ ಊಟವನ್ನು ನೀಡಬೇಕು.
- ವಾರಕ್ಕೆ ಎರಡು ಬಾರಿ ಮೊಟ್ಟೆ ನೀಡಬೇಕು
- ವಾರಕ್ಕೆ ಎರಡು ದಿನ ಸಿಹಿ ತಿಂಡಿಯನ್ನು ಮಾಡಬೇಕು.
- ಹಬ್ಬ-ಹರಿದಿನಗಳಲ್ಲೂ ವಿಶೇಷವಾಗಿ ಹಬ್ಬ ಆಚರಿಸಿ ಸ್ವೀಟ್ಸ್ ಮಾಡಬೇಕು.

**ಆಹಾರ ಸರಬರಾಜಿಗೆ ಗುತ್ತಿಗೆದಾರರನ್ನು ಗುರುತಿಸುವುದು:**

- ಸಂಬಂಧಿಸಿದ ತಾಲ್ಲೂಕಿಗೆ ಆಹಾರ ಸರಬರಾಜಿನ ಗುತ್ತಿಗೆಯನ್ನು ನೀಡಬೇಕು.

- ತಾಲ್ಲೂಕಿನಲ್ಲಿನ ಅರ್ಹ ಸ್ವಸಹಾಯ ಗುಂಪು, ಸ್ತ್ರೀಶಕ್ತಿ ಸಂಘಕ್ಕೆ ಅಥವಾ ಸರ್ಕಾರೇತರ ಸ್ವಯಂ ಸೇವಾ ಸಂಘ/ಏಜೆನ್ಸಿ ಗಳಿಂದ ಅರ್ಜಿಗಳನ್ನು ಆಹ್ವಾನಿಸಬೇಕು.
- ಸ್ವಸಹಾಯ ಗುಂಪು ಮತ್ತು ಸ್ತ್ರೀ ಶಕ್ತಿ ಉತ್ತಮ ಸಂಘಕ್ಕೆ ಆದ್ಯತೆಯನ್ನು ನೀಡುವುದು.
- ಆರ್ಥಿಕ ಪರಿಸ್ಥಿತಿ ಹೊಂದಿರುವ ಸಂಘಕ್ಕೆ ಆದ್ಯತೆ ನೀಡಬೇಕು. ಇದಕ್ಕಾಗಿ ಸಂಬಂದಿಸಿದ ದಾಖಲೆಗಳನ್ನು ಪರಿಶೀಲಿಸಬೇಕು (ಉಳಿತಾಯ ಮಾಡಲಾದ ಅನುದಾನ ಮತ್ತು ಬ್ಯಾಂಕಿನೊಂದಿಗೆ ಹಣ ವ್ಯವಹಾರ ಹಾಗೂ ನೋಂದಾವಣೆ ಪತ್ರ).
- ಕನಿಷ್ಠ 3 ವರ್ಷಗಳ ಸೇವಾ ಅನುಭವ ಇರಬೇಕು.
- ಏಜೆನ್ಸಿಯು ಸರ್ಕಾರದ ಇತರ ಇಲಾಖೆಗಳಲ್ಲಿ ಕಪ್ಪುಪಟ್ಟಿಗೆ ಒಳಪಟ್ಟಿರಬಾರದು.
- ಹೆಚ್ಚು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಮಹಿಳೆಯರಿರುವ ಗುಂಪಿಗೆ ಆದ್ಯತೆ ನೀಡಬೇಕು.
- ಸಮಾಜದಲ್ಲಿನ ಮಹಿಳೆಯರ ಪ್ರಗತಿಪರ ಕಾರ್ಯಗಳಲ್ಲಿ ಹೆಚ್ಚು ತೊಡಗಿರುವ ಸಂಘಕ್ಕೆ ಪ್ರಾತಿನಿಧ್ಯತೆಯನ್ನು ನೀಡಬೇಕು. ಅದರಲ್ಲೂ ಸಾಕ್ಷರ ಕಾರ್ಯಕ್ರಮಗಳಲ್ಲಿ ತೊಡಗಿದ ಸಂಘವನ್ನು ಗುರುತಿಸಬೇಕು.
- ರೂ.50,000/- ಮೊತ್ತವನ್ನು ಬಿಡ್ ಸೆಕ್ಯೂರಿಟಿಯಾಗಿ ಸಲ್ಲಿಸಬೇಕು.
- ಒಬ್ಬರು ಮುಖ್ಯ ಅಡಿಗೆಯವರು ಹಾಗೂ ಇಬ್ಬರು ಸಹಾಯಕ ಅಡುಗೆಯವರನ್ನು (ಎಲ್ಲರೂ ಮಹಿಳೆಯರು) ಶಾಲೆಯಲ್ಲಿ ಪೂರ್ಣಕಾಲಿಕವಾಗಿರುವಂತೆ ಸೇವೆ ಒದಗಿಸುವಂತಿರಬೇಕು.
- ಸಂಬಂಧಿಸಿದ ತಾಲ್ಲೂಕಿನವರಿಗೆ ಆದ್ಯತೆಯನ್ನು ನೀಡಬೇಕು.
- ರಾಜ್ಯ ಅಥವಾ ಜಿಲ್ಲಾ ಹಂತದ ಪ್ರಮುಖ ದಿನಪತ್ರಿಕೆಗಳಲ್ಲಿ ಏಜೆನ್ಸಿ ಆಯ್ಕೆ ಬಗ್ಗೆ ದರಪಟ್ಟಿ ಆಹ್ವಾನ ಕುರಿತ ಜಾಹೀರಾತು ನೀಡಬೇಕು.
- ದರಪಟ್ಟಿಗಳ ತುಲನಾತ್ಮಕ ಪಟ್ಟಿಯನ್ನು ಸಿದ್ದಪಡಿಸಿ, ಆಯ್ಕೆ ಸಮಿತಿಯಲ್ಲಿ ಅಂತಿಮಗೊಳಿಸಬೇಕು.
- ಆಯ್ಕೆಯಾದ ಸಂಘ/ಏಜೆನ್ಸಿಯೊಂದಿಗೆ ಇಲಾಖೆಯು ಸಂಬಂಧಿಸಿದ ಎಲ್ಲಾ ನಿಯಮಗಳನ್ನು ಅಳವಡಿಸಿ, ಕರಾರು ಪತ್ರವನ್ನು ಮಾಡಿಕೊಳ್ಳಬೇಕು.
- ಸರಿಯಾಗಿ ಸೇವೆಯನ್ನು ಒದಗಿಸದಿರುವ ಸಂಘ/ಏಜೆನ್ಸಿಯ ಕರಾರನ್ನು ರದ್ದುಗೊಳಿಸುವ ನಿಯಮವನ್ನು ಕರಾರು ಪತ್ರದಲ್ಲಿ ಅಳವಡಿಸಬೇಕು.

- ಸರಿಯಾಗಿ ಸೇವೆಯನ್ನು ಒದಗಿಸದಿರುವ ಹಾಗೂ ಬೇಜವಾಬ್ದಾರಿ ತೋರುವ ಸಂಘ/ಏಜೆನ್ಸಿಯ ಬಿಡ್ ಸೆಕ್ಯೂರಿಟಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ನಿಯಮವನ್ನು ಮತ್ತು ದಂಡ ವಿಧಿಸುವ ನಿಯಮಗಳನ್ನು ಕರಾರು ಪತ್ರದಲ್ಲಿ ಅಳವಡಿಸಬೇಕು.
- ಗುತ್ತಿಗೆಯನ್ನು ಜೂನ್-2010 ರಿಂದ ಏಪ್ರಿಲ್ -2011 ರವರೆಗೆ ಮಾಡಿಕೊಳ್ಳತಕ್ಕದ್ದು.

**ರಾಜ್ಯ ಯೋಜನಾ ನಿರ್ದೇಶಕರು**
ಸರ್ವ ಶಿಕ್ಷಣ ಅಭಿಯಾನ

## ಅನುಬಂಧ-2

## ಶಿಕ್ಷಕರ ಸೇವೆಯನ್ನು ಒದಗಿಸುವ ಏಜೆನ್ಸಿಯನ್ನು ಆಯ್ಕೆ ಮಾಡಲು ಅನುಸರಿಸಬೇಕಾದ ಮಾನದಂಡಗಳು

ಕೆ.ಜಿ.ಬಿ.ವಿ ಶಾಲೆಗಳು 2009-10ನೇ ಸಾಲಿನಲ್ಲಿ ಮಾದರಿ 3 ರಿಂದ ಮಾದರಿ 1 ಕ್ಕೆ ಪರಿವರ್ತನೆಯಾದ ಹಿನ್ನೆಲೆಯಲ್ಲಿ ಅರೆ ಕಾಲಿಕ ಶಿಕ್ಷಕರು ಹಾಗೂ ಸಹಾಯ ಸಿಬ್ಬಂದಿಯ ವೇತನವನ್ನು ಪರಿಷ್ಕರಿಸಲಾಗಿದೆ ಮತ್ತು ಹೆಚ್ಚುವರಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಮೂಲಕ ಕೆ.ಜಿ.ಬಿ.ವಿ. ಶಾಲೆಯ ವಿದ್ಯಾರ್ಥಿನಿಯರ ಸುಭದ್ರ ಭವಿಷ್ಯಕ್ಕೆ ಬುನಾದಿ ಹಾಕಲಾಗಿದೆ. ಒಬ್ಬ ವಾರ್ಡನ್, 6 ಅರೆಕಾಲಿಕ ಶಿಕ್ಷಕರು (ದೈ.ಶಿ.ಶಿಕ್ಷಕಿ, ವೃತ್ತಿಶಿಕ್ಷಣ ಶಿಕ್ಷಕಿ, ಕಂಪ್ಯೂಟರ್ ಶಿಕ್ಷಕಿ, ವಿಜ್ಞಾನ ಶಿಕ್ಷಕಿ ಮತ್ತು ಹಿಂದಿ ಶಿಕ್ಷಕಿ, ಸಂಗೀತ ಶಿಕ್ಷಕಿ,), 4 ಸಹಾಯಕ ಸಿಬ್ಬಂದಿ (ಲೆಕ್ಕಿಗರು, ಸಹಾಯಕಿ, ಮತ್ತು ಇಬ್ಬರು ಕಾವಲುಗಾರರು) ಆಯ್ಕೆಯನ್ನು ಏಜೆನ್ಸಿ/ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ಮಾಡಬೇಕು. ಕಾವಲುಗಾರರನ್ನು ಹೊರತು ಪಡಿಸಿ ಎಲ್ಲರೂ ಮಹಿಳೆಯರೇ ಆಗಿದ್ದು, ವಾರ್ಡನ್ ಹಾಗೂ ಸಹಾಯಕಿ ಶಾಲೆಯಲ್ಲಿ ವಾಸ್ತವ್ಯವಿರಬೇಕು. ಗೌರವಧನವನ್ನು ಸಂಬಂಧಿಸಿದ ಆದಾಯ ತೆರಿಗೆಯನ್ನು ಕಟಾಯಿಸಿ, ಚೆಕ್ ಮೂಲಕ ಬಿಡುಗಡೆ ಮಾಡಿ ಸ್ವೀಕೃತಿಯನ್ನು ಪಡೆದು ದಾಖಲೆಗಳನ್ನು ಕಾಯ್ದಿರಿಸಬೇಕು.

### ಇಲ್ಲಿಯವರೆಗೆ ಕೆಜಿಬಿವಿ ಅರೆಕಾಲಿಕ ಸಿಬ್ಬಂದಿಗೆ ಪಾವತಿಸುತ್ತಿದ್ದ ಗೌರವಧನದ ವಿವರ

| ಕ್ರ. ಸಂ | ಹುದ್ದೆ | ಸಂಖ್ಯೆ | ವಿದ್ಯಾರ್ಹತೆ | ಗೌರವಧನ (ಮಾಹೆಯಾನ) |
|---|---|---|---|---|
| 1 | ವಾರ್ಡನ್ / ಮೇಲ್ವಿಚಾರಣೆ | 1ಹುದ್ದೆ | ಪದವಿಯೊಂದಿಗ ಬಿ.ಎಡ್ | 4500/- |
| 2 | ದೈಹಿಕ ಶಿಕ್ಷಕಿ | 1ಹುದ್ದೆ | ಸಿ.ಪಿ.ಎಡ್ | 3000/- |
| 3 | ಹಿಂದಿ ಶಿಕ್ಷಕಿ | 1ಹುದ್ದೆ | ಬಿ.ಎ., ಬಿ.ಎಡ್ | 3000/- |
| 4 | ಹೊಲಿಗೆ /Craft Teacher | 1ಹುದ್ದೆ | ವೃತ್ತಿ ಶಿಕ್ಷಣದಲಿ ಡಿಪ್ಲಮೋ | 3000/- |
| 5 | ಕಛೇರಿ ಸಹಾಯಕಿ/ಲೆಕ್ಕಗರ/ಕಂಪ್ಯೂಟರ್ ಶಿಕ್ಷಕಿ | 1ಹುದ್ದೆ | ಬಿ.ಕಾಂ., ಹಾಗೂ ಕಂಪ್ಯೂಟರ್ ತರಬೇತಿ | 3500/- |
| 6 | ಸಹಾಯಕಿ | 1ಹುದ್ದೆ | 7ನೇ ತರಗತಿ | 2500/- |
| 7 | ಕಾವಲುಗಾರ | 1ಹುದ್ದೆ | 7 ನೇ ತರಗತಿ | 2000/- |

## ಕೆಜಿಬಿವಿ ಸಿಬ್ಬಂದಿಯ ಪರಿಷ್ಕರಿಸಿದ ವೇತನದ ವಿವರ:

| ಕ್ರ .ಸಂ | ಹುದ್ದೆ | ಸಂಖ್ಯೆ | ವಿದ್ಯಾರ್ಹತೆ | ಗೌರವಧನ (ಮಾಹೆಯಾನ) | ಷರಾ |
|---|---|---|---|---|---|
| 1 | ವಾರ್ಡನ್ | 1ಹುದ್ದೆ | ಬಿ.ಎ.,/ಬಿ.ಎಸ್ಸಿ., ಬಿ.ಎಡ್ | 6000/- | |
| 2 | ಗಣಿತ/ವಿಜ್ಞಾನ ಶಿಕ್ಷಕಿ | 1ಹುದ್ದೆ | ಬಿ.ಎಸ್ಸಿ. ಬಿ.ಎಡ್. / ಪಿ.ಯು.ಸಿ.,(ವಿಜ್ಞಾನ) ಡಿ.ಎಡ್ | 4000/- | |
| 3 | ಹಿಂದಿ ಶಿಕ್ಷಕಿ | 1 ಹುದ್ದೆ | ಬಿ.ಎ.,ಬಿ.ಎಡ್ | 4000/- | |
| 4 | ದೈಹಿಕ ಶಿಕ್ಷಕಿ | 1 ಹುದ್ದೆ | ಸಿ.ಪಿ.ಎಡ್ | 4000/- | |
| 5 | ವೃತ್ತಿ ಶಿಕ್ಷಕಿ/ಕ್ರಾಫ್ಟ್ | 1 ಹುದ್ದೆ | ವೃತ್ತಿ ಶಿಕ್ಷಣದಲ್ಲಿ ಡಿಪ್ಲಮೋ | 4000/- | |
| 6 | ಗುಮಾಸ್ತರು/ಲೆಕ್ಕಿಗರು | 1 ಹುದ್ದೆ | ಬಿ.ಕಾಂ., ಕಂಪ್ಯೂಟರ್ ಕೋರ್ಸ್ | 4000/- | ಇ-ಮೇಲ್ ಜ್ಞಾನ ಹೊಂದಿರಬೇಕು |
| 7 | ಕಂಪ್ಯೂಟರ್ ಶಿಕ್ಷಕಿ | 1 ಹುದ್ದೆ | ಪದವಿ / ಪಿ.ಯು.ಸಿ., ಮತ್ತು ಕಂಪ್ಯೂಟರ್ ಡಿಪ್ಲೋಮಾ | 4000/- | ಕಂಪ್ಯೂಟರ್ ಗಳು ಲಭ್ಯವಿದ್ದಲ್ಲಿ ಮಾತ್ರ ನೇಮಕ ಮಾಡುವುದು |
| 8 | ಸಂಗೀತ | 1 ಹುದ್ದೆ | ಪಿ.ಯು.ಸಿ., ಸಂಗೀತದಲ್ಲಿ ವಿದ್ವಾನ್ ಅಥವಾ ಸೀನಿಯರ್ ಉತ್ತೀರ್ಣರಾಗಿರಬೇಕು | 4000/- | |
| 9 | ಸಹಾಯಕಿ | 1 ಹುದ್ದೆ | ಎಸ್.ಎಸ್.ಎಲ್.ಸಿ | 3000/- | |
| 10 | ಕಾವಲುಗಾರ | 2 ಹುದ್ದೆ | 7ನೇ ತರಗತಿ | 2500/- | ಒಬ್ಬರು ಹಗಲು ಕಾವಲುಗಾರರು, ಇನ್ನೊಬ್ಬರು ರಾತ್ರಿ ಕಾವಲುಗಾರರು |
| | | ಒಟ್ಟು | | 39,500/- | |

**ಅರೆಕಾಲಿಕ ಸಿಬ್ಬಂದಿಯ ಗುತ್ತಿಗೆದಾರರ ಆಯ್ಕೆ :**

- ಸಂಬಂಧಿಸಿದ ಸಂಸ್ಥೆಯು ಸರ್ಕಾರದ ನಿಯಮಗಳಡಿಯಲ್ಲಿ ನೊಂದಾಯಿತ ಸಂಸ್ಥೆಯಾಗಿರಬೇಕು.
- ಕನಿಷ್ಠ 3 ವರ್ಷಗಳ ಸೇವಾ ಅನುಭವ ಇರಬೇಕು.
- ಏಜೆನ್ಸಿಯು ಸರ್ಕಾರದ ಇತರ ಇಲಾಖೆಗಳಲ್ಲಿ ಕಪ್ಪುಪಟ್ಟಿಗೆ ಒಳಪಟ್ಟಿರಬಾರದು.
- ಆರ್ಥಿಕ ಪರಿಸ್ಥಿತಿ ಹೊಂದಿರುವ ಸಂಘಕ್ಕೆ ಆದ್ಯತೆ ನೀಡಬೇಕು. ಇದಕ್ಕಾಗಿ ಸಂಬಂದಿಸಿದ ದಾಖಲೆಗಳನ್ನು ಪರಿಶೀಲಿಸಬೇಕು (ಲಳಿತಾಯ ಮಾಡಲಾದ ಅನುದಾನ ಮತ್ತು ಬ್ಯಾಂಕಿನೊಂದಿಗೆ ಹಣ ವ್ಯವಹಾರ ಹಾಗೂ ನೋಂದಾವಣೆ ಪತ್ರ).
- ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಹಾಗೂ ಸಂಬಂಧಿಸಿದ ತಾಲ್ಲೂಕಿನ ಸರ್ಕಾರೇತರ ಸಂಘ ಸಂಸ್ಥೆಗೆ ಆದ್ಯತೆ ನೀಡಬೇಕು.
- ನಿಗದಿಪಡಿಸಲಾಗಿರುವ ಗೌರವಧನದಲ್ಲಿ ಹೆಚ್ಚು ಗೌರವಧನವನ್ನು ಅಭ್ಯರ್ಥಿಗಳಿಗೆ ನೀಡುವ ಸಂಸ್ಥೆಗೆ ಆದ್ಯತೆಯನ್ನು ನೀಡಬೇಕು.
- ಎಲ್ಲಾ ಹುದ್ದೆಗಳು (ಕ್ರ.ಸಂ.10 ಹೊರತು ಪಡಿಸಿ) ಮಹಿಳೆಯರಿಗೆ ಮಾತ್ರ.

- ಬೇಸಿಗೆ ಕಾಲದ ಧೀರ್ಘಾವಧಿಯಲ್ಲಿ ವಾರ್ಡನ್, ಸಹಾಯಕಿ ಮತ್ತು ಕಾವಲುಗಾರರು ಶಾಲೆಯಲ್ಲಿ ಹಾಜರಿದ್ದು, ಇತರೆ ಅರೆಕಾಲಿಕ ಸಿಬ್ಬಂದಿಯು ತಾಲ್ಲೂಕಿನ ಸಂಪನ್ಮೂಲ ವ್ಯಕ್ತಿಗಳ ಸಹಕಾರದೊಂದಿಗೆ ಗ್ರಾಮಗಳಿಗೆ ಭೇಟಿ ನೀಡಿ ಅರ್ಹ ಹೆಣ್ಣುಮಕ್ಕಳನ್ನು ಗುರುತಿಸುವ ಕಾರ್ಯ ನಡೆಸಬೇಕು.
- ಗುತ್ತಿಗೆಯನ್ನು ಜೂನ್–2010 ರಿಂದ ಏಪ್ರಿಲ್ –2011 ರವರೆಗೆ ಮಾಡಿಕೊಳ್ಳತಕ್ಕದ್ದು.
- ರೂ.25,000/– ಮೊತ್ತವನ್ನು ಬಿಡ್ ಸೆಕ್ಯೂರಿಟಿಯಾಗಿ ಸಲ್ಲಿಸಬೇಕು.
- ಸಂಬಂಧಿಸಿದ ತಾಲ್ಲೂಕಿನವರಿಗೆ ಆದ್ಯತೆಯನ್ನು ನೀಡಬೇಕು.
- ರಾಜ್ಯ ಅಥವಾ ಜಿಲ್ಲಾ ಹಂತದ ಪ್ರಮುಖ ದಿನಪತ್ರಿಕೆಗಳಲ್ಲಿ ಏಜೆನ್ಸಿ ಆಯ್ಕೆ ಬಗ್ಗೆ ದರಪಟ್ಟಿ ಆಹ್ವಾನ ಕುರಿತ ಜಾಹೀರಾತು ನೀಡಬೇಕು.
- ದರಪಟ್ಟಿಗಳ ತುಲನಾತ್ಮಕ ಪಟ್ಟಿಯನ್ನು ಸಿದ್ಧಪಡಿಸಿ, ಆಯ್ಕೆ ಸಮಿತಿಯಲ್ಲಿ ಅಂತಿಮಗೊಳಿಸಬೇಕು.
- ಆಯ್ಕೆಯಾದ ಸಂಘ/ಏಜೆನ್ಸಿಯೊಂದಿಗೆ ಇಲಾಖೆಯು ಸಂಬಂಧಿಸಿದ ಎಲ್ಲಾ ನಿಯಮಗಳನ್ನು ಅಳವಡಿಸಿ, ಕರಾರು ಪತ್ರವನ್ನು ಮಾಡಿಕೊಳ್ಳಬೇಕು.
- ಸರಿಯಾಗಿ ಸೇವೆಯನ್ನು ಒದಗಿಸದಿರುವ ಸಂಘ/ಏಜೆನ್ಸಿಯ ಕರಾರನ್ನು ರದ್ದುಗೊಳಿಸುವ ಮತ್ತು ದಂಡ ವಿಧಿಸುವ ನಿಯಮವನ್ನು ಕರಾರು ಪತ್ರದಲ್ಲಿ ಅಳವಡಿಸಬೇಕು.
- ಸರಿಯಾಗಿ ಸೇವೆಯನ್ನು ಒದಗಿಸದಿರುವ ಹಾಗೂ ಬೇಜವಾಬ್ದಾರಿ ತೋರುವ ಸಂಘ/ಏಜೆನ್ಸಿಯ ಬಿಡ್ ಸೆಕ್ಯೂರಿಟಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ನಿಯಮವನ್ನು ಕರಾರು ಪತ್ರದಲ್ಲಿ ಅಳವಡಿಸಬೇಕು.

**ಅರೆಕಾಲಿಕ ಸಿಬ್ಬಂದಿ ನೇಮಕಾತಿಗೆ ಇನ್ನಿತರ ಸೂಚನೆಗಳು :**

- ಖಾಸಗಿ ಸಂಸ್ಥೆಯ ಮೂಲಕ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಸಿಬ್ಬಂದಿಗೆ ಪ್ರತ್ಯೇಕ ಹಾಜರಾತಿ ಪುಸ್ತಕಗಳನ್ನು ನಿರ್ವಹಿಸಬೇಕು.
- ಸೇವಾ ಮನೋಭಾವವುಳ್ಳ ಸಿಬ್ಬಂದಿಯನ್ನು ಆಯ್ಕೆ ಮಾಡಬೇಕು.
- ಸಿಬ್ಬಂದಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಆಯ್ಕೆ ಸಮಿತಿಯ ಸದಸ್ಯರು ಉಪಸ್ಥಿತರಿದ್ದು, ಅರ್ಹರನ್ನು ಆಯ್ಕೆ ಮಾಡಬೇಕು.
- ಒಂದು ತಿಂಗಳಿಗೆ ಒಂದರಂತೆ ಒಂದು ಸಾಂದರ್ಭಿಕ ರಜೆ ಗಳಿಸುತ್ತಾರೆ. ಕ್ಯಾಲೆಂಡರ್ ವರ್ಷದೊಳಗೆ ಅವುಗಳನ್ನು ಉಪಯೋಗಿಸಬಹುದು. ನಂತರ ಸಂಚಯನಗೊಳ್ಳುವುದಿಲ್ಲ.
- ಹೆಚ್ಚುವರಿ ರಜೆಗಳನ್ನು ಪಡೆದಲ್ಲಿ ಅಂತಹ ದಿನಗಳಿಗೆ ಗೌರವ ಧನ ಕಟಾಯಿಸಬೇಕು.
- ಧೀರ್ಘಾಕಾಲಿಕ / ಹೆಚ್ಚುವರಿ ರಜೆಗಳನ್ನು ಪಡೆಯಬೇಕಾದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು / ಮುಖ್ಯ ಶಿಕ್ಷಕರಿಂದ 15 ದಿನಗಳ ಮೊದಲೇ ಅನುಮೋದನೆ ಪಡೆಯಬೇಕು.

- ಗೌರವ ಧನವನ್ನು ಸಂಬಂಧಿಸಿದ ಏಜೆನ್ಸಿಗೆ ಆದಾಯ ತೆರಿಗೆ ಕಟಾಯಿಸಿ ಚೆಕ್ ಮೂಲಕ ನೀಡಬೇಕು.
- ಮೂರು ದಿನಗಳಿಗಿಂತ ಅಧಿಕವಾಗಿ ಅನುಮತಿ ಪಡೆಯದೆ ಗೈರು ಹಾಜರಾದವರ ಬದಲಿಗೆ ಬೇರೆ ವ್ಯವಸ್ಥೆ ಮಾಡಲು ಏಜೆನ್ಸಿಗೆ ತಿಳಿಸಬೇಕು ಹಾಗೂ ಅವರು ಒಂದು ವಾರದೊಳಗೆ ಬದಲಿ ವ್ಯವಸ್ಥೆಯನ್ನು ಮಾಡತಕ್ಕದ್ದು.
- ಉತ್ತಮವಾಗಿ ಸೇವೆ ಸಲ್ಲಿಸದ ಸಿಬ್ಬಂದಿಯ ಬದಲಿಗೆ ಬೇರೆ ವ್ಯವಸ್ಥೆಯನ್ನು ಮಾಡುವುದು.

**ರಾಜ್ಯ ಯೋಜನಾ ನಿರ್ದೇಶಕರು**

ಸರ್ವ ಶಿಕ್ಷಣ ಅಭಿಯಾನ